ಸಾಕ್ಷಿಯನ್ನು ಸತ್ಯ ಪ್ರತಿಜ್ಞೆಯ ಮೇರೆಗೆ ಇಂದು ದಿನಾಂಕ: 27.03.2026 ರಂದು ಪ್ರಮಾಣೀಕರಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆ: ಪ್ರತಿವಾದಿಗಳ ಪರ ಶ್ರೀ. ಇ.ಜಿ., ವಕೀಲರಿಂದ.**

ನಾನು ಈ ದಾವೆಯಲ್ಲಿ 4 ನೇ ಪ್ರತಿವಾದಿ ಇರುತ್ತೇನೆ. ಈ ದಿನ ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮುಖಾಂತರ ಸಲ್ಲಿಸಿರುತ್ತೇನೆ. ನನ್ನ ಪ್ರಮಾಣ ಪತ್ರದಲ್ಲಿ ಬರೆದಿರುವ ಎಲ್ಲಾ ವಿಷಯಗಳು ನನಗೆ ತಿಳಿದ ಮಾಹಿತಿಯಂತೆ ಸತ್ಯವಾಗಿರುತ್ತವೆ. ಪ್ರಮಾಣ ಪತ್ರವನ್ನು ನಾನು ನೀಡಿದ ಮಾಹಿತಿ ಮೇರೆಗೆ ತಯಾರಿಸಲಾಗಿರುತ್ತದೆ. ಪ್ರಮಾಣ ಪತ್ರವನ್ನು ನನಗೆ ಓದಿ ಹೇಳಲಾಗಿದ್ದು, ಅದನ್ನು ತಿಳಿದುಕೊಂಡು ಸಹಿ ಮಾಡಿರುತ್ತೇನೆ.

ನಾನು ಈ ಕೆಳಕಂಡ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. ಸದರಿ ದಾಖಲೆಗಳನ್ನು ಈ ಕೆಳಕಂಡಂತೆ ಗುರುತಿಸಲಾಗಿರುತ್ತದೆ.

| | |
|---|---|
| ನಿ.ಡಿ.3 | ದಿ:16.03.2019 ರ ಕ್ರಯ ಪತ್ರದ ಮೂಲ ಪ್ರತಿ |
| ನಿ.ಡಿ.4 | ಸರ್ವೇ ನಂಬರ್ 57/9 ರ ಪಹಣಿ ಪತ್ರಿಕೆ |

ಪಾಟೀ ಸವಾಲು: (ವಾದಿ ಪರ ವಕೀಲರು ಪಾಟೀಸವಾಲಿಗೆ ಸಮಯ ಕೋರಿದ್ದು, ಕಾಲಾವಕಾಶ ನೀಡಿ ಪ್ರಕರಣವನ್ನು ಮುಂದೂಡಲಾಯಿತು. )

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿಯಾಗಿದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
*ಜೆ.ಎಂ.ಎಫ್.ಸಿ. ಶ್ರೀನಿವಾಸಪುರ.*